## ಟ್ವೀಟು ಖಾರ

**ನರೇಂದ್ರ ಮೋದಿ**
@narendramodi

ಕಾಂಗ್ರೆಸ್ ಖಾದಿಗೆ ಯಾವ ರೀತಿ ಪ್ರಚಾರ ನೀಡಿದೆ? ನಾವು ಜಗತ್ತಿನ ತುಂಬಾ ಖಾದಿ ಬಗ್ಗೆ ಜನಪ್ರಿಯತೆ ತಂದು ಕೊಟ್ಟಿದ್ದೇವೆ. ಈಗ ಖಾದಿ ಜಾಕೆಟ್ ಮತ್ತೆ ಜನಪ್ರಿಯತೆ ಪಡೆದಿದೆ. ಕಾಂಗ್ರೆಸ್ ಅವರಿಗೆ ಮೋದಿ ಜಾಕೆಟ್ ಒಂದು ಸಮಸ್ಯೆಯಾಗಿದೆ.!

**ದೇವೇಂದ್ರ ಫಡ್ನವೀಸ್**
@Dev_Fadnavis

ಭಾರತದ ಇಸ್ರೋಗೆ ಅನಂತ ಧನ್ಯವಾದಗಳು. ಭಾರತದ ಅತಿ ದೈತ್ಯ ಹಾಗೂ ಹೆಚ್ಚು ತೂಕದ ಜಿಸ್ಯಾಟ್-11 ಉಪಗ್ರಹ ಯಶಸ್ವಿ ಯಾಗಿದೆ. ಇದಕ್ಕೆ ಮಹಾರಾಷ್ಟ್ರ ಸರಕಾರ ಧನ್ಯವಾದ ಅರ್ಪಿಸುತ್ತಿದೆ.

**ನಿತಿನ್ ಗಡ್ಕರಿ**
@nitin_gadkari

ಗಂಗೆಯನ್ನು ಸ್ವಚ್ಛಗೊಳಿಸುವುದಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ಈ ಉತ್ತಮ ಕಾರ್ಯಕ್ಕೆ ವಿಜ್ಞಾನಿಗಳು, ಪದವೀಧರರು ಎಲ್ಲರೂ 'ವೆಸ್ಟ್ ಟೂ ವೆಲ್ತ್' ಎಂಬ ಘೋಷವಾಕ್ಯದೊಂದಿಗೆ ನೂತನ ಕಾರ್ಯಗಳನ್ನು ಮಾಡಲು ಎಲ್ಲರೂ ಕೈಜೋಡಿಸುತ್ತಿದ್ದಾರೆ.

**ಪ್ರಕಾಶ್ ಜಾವ್ಡೇಕರ್**
@PrakashJavdekar

ರಾಜಸ್ಥಾನದಲ್ಲಿ ಬುಧವಾರ ಪ್ರಚಾರದ ಕಡೇಯ ದಿನ. ಸಿವಿಲ್‌ಲೈನ್ಸ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರವಾಗಿ ನಡೆದ ಮೋಟಾರ್‌ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿದೆ. ಜನರ ಉತ್ಸಾಹ ಕಂಡು ಬಿಜೆಪಿ ಗೆಲ್ಲುವ ನಂಬಿಕೆ ಬಂದಿದೆ.

**ಅರವಿಂದ್ ಕೇಜ್ರಿವಾಲ್**
@ArvindKejriwal

ಸಂತ ಗೋಪಾಲದಾಸ ಅವರು ಚೇನಾದ ಅನ್‌ಶಾನ್‌ದಲ್ಲಿ ಗಂಗೆಯನ್ನು ಸ್ವಚ್ಛಗೊಳಿಸುವ ಕಾರ್ಯ ಕೈಗೊಂಡಿದ್ದರು. ಆದರೆ ಮೋದಿ ಸರಕಾರದ ಚಿಂತನೆಯಿಂದ ಕಣ್ಮರೆಯಾಗಿರುವುದು ನಿಜಕ್ಕೂ ದುರದೃಷ್ಟಕರ.

## ಇವತ್ತಿನ ರೇಟು

| | | |
|---|---|---|
| ಸೆನ್ಸೆಕ್ಸ್ | -249.90 | 35 ,884 |
| ನಿಫ್ಟಿ | -86.60 | 10,782 |

₹ ಮೌಲ್ಯ

| | |
|---|---|
| $ | 70.46 |
| € | 80.06 |
| £ | 90.04 |

### ಆಭರಣ

ಚಿನ್ನ

| ಬೆಂಗಳೂರು, 10 ಗ್ರಾಂಗೆ | |
|---|---|
| ಶುದ್ಧ ಚಿನ್ನ | 31,460 |
| ಒಡವೆ ಚಿನ್ನ | 29,580 |
| ಮುಂಬೈ, 10 ಗ್ರಾಂಗೆ | |
| ಶುದ್ಧ ಚಿನ್ನ | 31,380 |
| ಒಡವೆ ಚಿನ್ನ | 29,500 |

ಬೆಳ್ಳಿ

| ಬೆಂಗಳೂರು, ಪ್ರತಿ ಕೆಜಿಗೆ | |
|---|---|
| ಶುದ್ಧ ಬೆಳ್ಳಿ | 39,567 |
| ಮುಂಬೈ, ಪ್ರತಿ ಕೆಜಿಗೆ | |
| ಶುದ್ಧ ಬೆಳ್ಳಿ | 39,542 |

### ಕೋಳಿ/ಮೊಟ್ಟೆ

| ಇವತ್ತಿನ ರೇಟ್ | |
|---|---|
| 100ಕ್ಕೆ | 404 |
| ಸುಗುಣ ಚಿಕನ್ | |
| ಕೆ.ಜಿ. | 65 |
| ವೆಂಕೋಬ್ ಚಿಕನ್ | |
| ಕೆ.ಜಿ. | 78 |

### ರೇಷ್ಮೆ (ರಾಮನಗರ-ಕೆ.ಗೆ)

| | |
|---|---|
| ಬೈವೋಲ್ಟಿನ್ | 335-628 |
| ಮಿಶ್ರತಳಿ | 228-480 |

### ಏಲಕ್ಕಿ ಪ್ರತಿ ಕೆ.ಜಿ. (ಹಸಿರು)

| | |
|---|---|
| ಸಕಲೇಶಪುರ | 630 |
| ಮಡಿಕೇರಿ | 550 |

### ಅಡಕೆ ಶಿವಮೊಗ್ಗ

ಕ್ವಿಂಟಾಲ್‌ಗೆ

| | |
|---|---|
| ಗೊರಬಲು | 25,699 |
| ರಾಶಿ | 34,800 |
| ಸರಕು | 62,296 |

### ಎಪಿಎಂಸಿ

ಯಶವಂತಪುರ

| ಅಕ್ಕಿ - ಸೋನಾ ಮಸೂರಿ | |
|---|---|
| ದಪ್ಪ | 5,240 |
| ಐಆರ್-64 | 3,380 |
| ಮಧ್ಯಮ | 4,700 |
| ರಾಗಿ (ಉತ್ತಮ) | 3,100 |
| ರಾಗಿ(ಸ್ಥ) | 2,900 |
| ಜೋಳ (ವಿಜಯಪುರ) | 3,250 |
| ಅಚ್ಚುಬೆಲ್ಲ | 4000 |
| ಮುದ್ದೆಬೆಲ್ಲ | 4,300 |
| ಧನಿಯಾ (ಸ್ಥ) | 13000 |
| ಬ್ಯಾಡಗಿ ಮೆಣಸು. | 19000 |
| ಗುಂಟೂರು ಮೆ. | 12000 |
| ಬಿಳಿ ಈರುಳ್ಳಿ | 2000 |
| ಸಣ್ಣ ಈರುಳ್ಳಿ (ಸ್ಥ) | 1,350 |
| ಬೆಳ್ಳುಳ್ಳಿ | 3,200 |
| ಹೆಸರುಕಾಳು (ಸ್ಥ) | 5,656 |
| ಬಟಾಣಿ (ಹಸಿ) | 7,800 |
| ಗೋಧಿ (ಸ್ಥ) | 3,400 |
| ಕಡಲೆಬೇಳೆ | 6,800 |
| ಅವರೆಬೇಳೆ | 5,500 |
| ತೊಗರಿಬೇಳೆ | 7,600 |
| ಹೆಸರುಬೇಳೆ | 8,000 |

### ಕಾಫಿಧಾರಣೆ

| ಚಿಕ್ಕಮಗಳೂರು | 50ಕೆಜಿ |
|---|---|
| ಅರೇಬಿಕಾ ಪಾರ್ಚ್‌ಮೆಂಟ್ | 8,600 |
| ಅರೇಬಿಕಾ ಚೆರ್ರಿ | 3,850 |
| ರೋಬೊಸ್ಟ ಪಾರ್ಚ್‌ಮೆಂಟ್ | 5650 |
| ರೋಬೊಸ್ಟ ಚೆರ್ರಿ | 3125 |

### ಹಾಪ್‌ಕಾಮ್ಸ್

| | |
|---|---|
| ಟೊಮೆಟೊ | 23 |
| ಆಲೂಗಡ್ಡೆ | 32 |
| ಕ್ಯಾರೆಟ್ (ನಾಟಿ) | 52 |
| ಹುರುಳಿಕಾಯಿ | 42 |
| ಕ್ಯಾಬೇಜ್ | 17 |
| ಹೂಕೋಸು | 35 |
| ಹಸಿಮೆಣಸಿನಕಾಯಿ | 40 |
| ಕೊತ್ತಂಬರಿಸೊಪ್ಪು | 32(ಕಟ್ಟು) |
| ಮೆಂತೆಸೊಪ್ಪು | 42(ಕಟ್ಟು) |
| ಬೆಂಡೆಕಾಯಿ | 43 |
| ಸೌತೆಕಾಯಿ | 32 |
| ಅವರೆಕಾಯಿ | 44 |
| ಅಣಬೆ | 200 |
| ಕುಂಬಳಕಾಯಿ | 20 |
| ಸ್ವೀಟ್ ಕಾರ್ನ್ | 48 |
| ಪಚ್ಚಬಾಳೆ | 26 |
| ಏಲಕ್ಕಿ ಬಾಳೆ | 52 |
| ಕಿತ್ತಳೆ | 65 |
| ಮೊಸಂಬಿ | 68 |
| ಕಲ್ಲಂಗಡಿ | 25 |
| ಕರಬೂಜ | 54 |
| ಪಪ್ಪಾಯಿ | 22 |
| ದ್ರಾಕ್ಷಿ | 58 |
| ಬೀಟ್ ರೂಟ್ | 39 |

ರಾಹುಲ್ ಗಾಂಧಿ ಎಡವಟ್ಟನ್ನು ಮತ್ತೆ ಅಸ್ತ್ರವಾಗಿ ಬಳಸಿಕೊಂಡ ಮೋದಿ

# ಕಾಂಗ್ರೆಸ್‌ಗೆ ತಮ್ಮ ನಾಯಕರ ಹೆಸರೇ ಗೊತ್ತಿಲ್ಲ

**ಜೈಪುರ:** ರಾಜಸ್ತಾನದಲ್ಲಿ ಚುನಾವಣೆ ಹೊಸ್ತಿಲಲ್ಲಿರುವಾಗ ರಾಜಕೀಯ ನಾಯಕರ ವಾಕ್ಸಮರ ತಾರಕಕ್ಕೇರಿದ್ದು, ಪರಸ್ಪರ ಟೀಕಾ ಪ್ರಹಾರ ಜೋರಾಗಿ ಸಾಗಿದೆ. ಈ ಮಧ್ಯೆ ರಾಹುಲ್ ಗಾಂಧಿ ಅವರ ಭಾಷಣದ ಯಡ ವಟ್ಟಿನ ಲಾಭ ಪಡೆಯಲು ಪ್ರಧಾನಿ ನರೇಂದ್ರ ಮೋದಿ ಮುಂದಾಗಿದ್ದು, 'ಕಾಂಗ್ರೆಸ್ ಅಧ್ಯಕ್ಷರಿಗೆ ತಮ್ಮ ಪಕ್ಷದ ಇತರೆ ನಾಯಕರ ಹೆಸರುಗಳೇ ಸರಿಯಾಗಿ ತಿಳಿದಿಲ್ಲ' ಎಂದು ಕುಟುಕಿದ್ದಾರೆ.

ಮಂಗಳವಾರ ಜುಂಜುಹುನು ರ್‍ಯಾಲಿಯಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ 'ಅಶೋಕ್ ಗೆಹ್ಲೋಟ್ ಅವರು ಕುಂಭಕರ್ಣ ಲಿಫ್ಟ್ ಯೋಜನೆಗೆ ಹಣ ನೀಡಿದ್ದಾರೆ' ಎಂದು ಹೇಳಿದ್ದರು. ಈ ಯೋಜನೆಯ ಹೆಸರು 'ಕುಂಭ ರಾಮ ಲಿಫ್ಟ್ ಯೋಜನೆ' ಆಗಿದ್ದು ರಾಹುಲ್ ಗಾಂಧಿ ಅವರು ತಪ್ಪಾಗಿ ಉಚ್ಚರಿಸಿದ್ದರು. ನಂತರ ಪಕ್ಕದಲ್ಲಿದ್ದವರು ರಾಹುಲ್ ಅವರ ತಪ್ಪನ್ನು ಅರಿವಿಗೆ ತಂದು ನಂತರ ಅದನ್ನು ಸರಿಯಾಗಿ ಹೇಳಲಾಗಿತ್ತು.

ಇದನ್ನೇ ಟೀಕಾಸ್ತ್ರವಾಗಿ ಬಳಸಿಕೊಂಡಿರುವ ಪ್ರಧಾನಿ ಮೋದಿ, ಬುಧವಾರ ರಾಜಸ್ತಾನದಲ್ಲಿ ನಡೆದ ಪ್ರಚಾರ ಸಮಾವೇಶದಲ್ಲಿ 'ರಾಹುಲ್ ಗಾಂಧಿ ಅವರ ನಾಲಿಗೆ ಕ್ಷಣ ಕ್ಷಣಕ್ಕೂ ಬದಲಾಗುತ್ತಿದೆ. ಅದಕ್ಕೆ ಕುಂಭ ರಾಮ ಲಿಫ್ಟ್ ಯೋಜನೆಗೆ ಕುಂಭಕರ್ಣ ಲಿಫ್ಟ್ ಯೋಜನೆ ಎಂದು ಕರೆದಿದ್ದಾರೆ' ಎಂದು ಹೇಳಿದರು.

ಕಾಂಗ್ರೆಸ್ ಅಧ್ಯಕ್ಷರಿಗೆ ಕುಂಭ ರಾಮ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಹಾಗೂ ತಮ್ಮ ಪಕ್ಷದ ಮಾಜಿ ಮುಖಂಡ ಎಂಬ ಕನಿಷ್ಠ ತಿಳುವಳಿಕೆ ಕೂಡ ಇಲ್ಲ ಎಂದು ವ್ಯಂಗ್ಯವಾಡಿದರು.

ರಾಹುಲ್ ಗಾಂಧಿಗೆ ಅವರ ಪಕ್ಷದಲ್ಲಿ ಯಾರೆಲ್ಲಾ ಸೇವೆ ಸಲ್ಲಿಸಿದ್ದಾರೆಂದು ಅವರಿಗೆ ಗೊತ್ತಿಲ್ಲ. ಕುಂಭ ರಾಮ ಅವರನ್ನು ಕುಂಭಕರ್ಣ ಎಂದು ಹೀಯಾಳಿಸಿರುವುದೇ ಅದಕ್ಕೆ ಸಾಕ್ಷಿ. ಕುಂಭಕರ್ಣ ಎಂಬ ವ್ಯಕ್ತಿ ಹಿಂದೂ ಪುರಾಣದಲ್ಲಿ ಬರುವ ರಾವಣನ ತಮ್ಮ ಎಂಬುದೇ ಕಾಂಗ್ರೆಸ್ ಅಧ್ಯಕ್ಷರಿಗೆ ಗೊತ್ತಿಲ್ಲ ಎನಿಸುತ್ತದೆ ಎಂದರು.

## ಡಿ.25ಕ್ಕೆ ರೈಲ್ವೇ ಸೇತುವೆ ಉದ್ಘಾಟನೆ

**ಅಸ್ಸಾಂನಲ್ಲಿ ಬ್ರಹ್ಮಪುತ್ರ ನದಿಯ ಉತ್ತರ ತೀರದಿಂದ ದಕ್ಷಿಣಕ್ಕೆ ಸಂಪರ್ಕ ಕಲ್ಪಿಸುವ 4.94 ಕಿ. ಮೀ. ಉದ್ದದ ರೈಲ್ವೇ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಡಿಸೆಂಬರ್ 25 ರಂದು ಉದ್ಘಾಟಿಸಲಿದ್ದಾರೆ. ಬೋಗೀಬಿಲ್ ಸೇತುವೆ ದೇಶದ ಅತ್ಯಂತ ಉದ್ದದ ರೈಲು ಸೇತುವೆ ಮಾರ್ಗವಾಗಿದೆ. ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ಗಡಿ ಭಾಗದಿಂದ 20 ಕಿ.ಮೀ. ದೂರದಲ್ಲಿ ಬ್ರಹ್ಮಪುತ್ರ ನದಿಗೆ ಅಡ್ಡವಾಗಿ ನಿರ್ಮಾಣವಾಗಿರುವ ಸೇತುವೆಯ ಧೆಮಾಜೀ ಮತ್ತು ಡಿಬ್ರೂಗಢ ಜಿಲ್ಲೆಗಳ ನಡುವೆ ಈ ಸಂಪರ್ಕ ಕಲ್ಪಿಸುತ್ತಿದೆ. ಬೋಗೀಬೀಲ್ ಸೇತುವೆ ನಿರ್ಮಾಣಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ 1997ರಲ್ಲಿ ಶಂಕು ಸ್ಥಾಪನೆ ನೆರವೇರಿಸಿದ್ದರು. ಆದರೆ, ಸೇತುವೆಯ ನಿರ್ಮಾಣ ಕಾರ್ಯ ಆರಂಭಗೊಂಡಿದ್ದು 2002ರ ಏಪ್ರಿಲ್‌ನಲ್ಲಿ. ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿದ್ದರು. 16 ವರ್ಷಗಳಲ್ಲಿ ಸೇತುವೆ ನಿರ್ಮಾಣದ ಅಂತಿಮ ಹಂತದ ಕಾಮಗಾರಿಯನ್ನು ಅನೇಕ ಬಾರಿ ಮುಂದೂಡಲಾಗಿತ್ತು. ಡಿ.2 ರಂದು ಸೇತುವೆಯ ಮೇಲೆ ಮೊದಲ ಬಾರಿಗೆ ಸರಕು ರೈಲು ಸಂಚಾರ ನಡೆಸಿತು. ಅರುಣಾಚಲ ಪ್ರದೇಶದ ಗಡಿ ಭಾಗದಲ್ಲಿ ಸರಕು ಸಾಗಣೆ ಉತ್ತಮ ಪಡಿಸುವ ನಿಟ್ಟಿನಲ್ಲಿ 4.94 ಕಿ.ಮೀ. ಉದ್ದದ ಬೋಗೀಬೀಲ್ ಸೇತುವೆ ಪ್ರಮುಖ ಯೋಜನೆಗಳಲ್ಲೊಂದಾಗಿದೆ. ಆರಂಭದಲ್ಲಿ ಈ ರೈಲು ಸೇತುವೆ ನಿರ್ಮಾಣಕ್ಕೆ 3,230.02 ಕೋಟಿ ರು. ಬಿಡುಗಡೆ ಮಾಡಲಾಗಿತ್ತು. ನಂತರ ಇದರ ಮೊತ್ತವನ್ನು 4,857 ಕೋಟಿಗೆ ಹೆಚ್ಚಿಸಲಾಯಿತು. ಆರಂಭದಲ್ಲಿ 4.31 ಕಿ.ಮೀ ಉದ್ದವಿದ್ದ ಈ ರೈಲ್ವೇ ಸೇತುವೆಯನ್ನು 5 ಕಿ.ಮೀಗೆ ವಿಸ್ತರಿಸಿದ್ದರಿಂದ ವೆಚ್ಚ ಹೆಚ್ಚಾಯಿತು.**

## ಕಲ್ಲಿದ್ದಲು ಹಗರಣ: ಮೂವರಿಗೆ ಜೈಲು ಶಿಕ್ಷೆ

**ದೆಹಲಿ:** ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ನ್ಯಾಯಾಲಯ ಇಲಾಖೆಯ ಮಾಜಿ ಕಾರ್ಯದರ್ಶಿ ಎಚ್.ಸಿ ಗುಪ್ತಾ ಸೇರಿ ಒಟ್ಟು ಮೂವರಿಗೆ 3 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಬುಧವಾರ ತೀರ್ಪು ಪ್ರಕಟಿಸಿದ ಕೋರ್ಟ್, ಗುಪ್ತಾ ಸೇರಿದಂತೆ ಮತ್ತಿಬ್ಬರು ಅಪರಾಧಿಗಳಾದ ಕೆಎಸ್ ಕ್ರೋಫಾ ಮತ್ತು ಕೆ.ಸಿ ಸಂಮ್ರಿಯಾ ಅವರಿಗೆ ತಲಾ 50 ಸಾವಿರು ರು. ದಂಡವನ್ನು ವಿಧಿಸಿತು. ಇನ್ನು ಶಿಕ್ಷೆ ನಾಲ್ಕು ವರ್ಷಕ್ಕಿಂತ ಕಡಿಮೆ ಇರುವ ಹಿನ್ನೆಲೆಯಲ್ಲಿ ಇವರಿಗೆ ಜಾಮೀನು ನೀಡಲು ಒಪ್ಪಿಗೆ ಸೂಚಿಸಿತು.

ಇನ್ನು ಇತರೆ ಅಪರಾಧಿಗಳಾದ ವಿಕಾಸ್ ಮೆಟಲ್ಸ್ ಅಂಡ್ ಪವರ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ವಿಕಾಸ್ ಪಟ್ನಿ ಹಾಗೂ ಈ ಸಂಸ್ಥೆಯ ಅಧಿಕಾರಿ ಆನಂದ್ ಮಲ್ಲಿಕ್ ಅವರಿಗೆ 4 ವರ್ಷ ಜೈಲು ಶಿಕ್ಷೆ ವಿಧಿಸಿದೆ. ಅಲ್ಲದೆ ವಿಕಾಸ್ ಅವರಿಗೆ 25 ಲಕ್ಷ ಹಾಗೂ ಆನಂದ್ ಅವರಿಗೆ 2 ಲಕ್ಷ ದಂಡ ವಿಧಿಸಿದೆ ವಿಶೇಷ ನ್ಯಾಯಾಧೀಶರಾದ ಭಾರತ್ ಪ್ರಸಾರ್ ಆದೇಶ ನೀಡಿದ್ದಾರೆ. ಸಿಬಿಐ ಈ ಪ್ರಕರಣದಲ್ಲಿ ತಪ್ಪಿತಸ್ಥರಾಗಿರುವ ಐದೂ ಅಪರಾಧಿಗಳಿಗೆ 7 ವರ್ಷ ಜೈಲು ಶಿಕ್ಷೆ ಹಾಗೂ ಖಾಸಗಿ ಕಂಪನಿಗೆ ಭಾರಿ ಮೊತ್ತದ ದಂಡ ವಿಧಿಸಬೇಕು ಎಂದು ನ್ಯಾಯಾಲಯದ ಮುಂದೆ ವಾದ ಮಂಡಿಸಿತ್ತು.

## ಜಯಲಲಿತಾ 2ನೇ ಪುಣ್ಯತಿಥಿ ಆಚರಣೆ

**ಚೆನ್ನೈ:** ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ 2ನೇ ವರ್ಷ ಪುಣ್ಯತಿಥಿಯನ್ನು ಬುಧವಾರ ಆಚರಿಸಲಾಯಿತು.. ಸಿಎಂ ಪಳನಿಸ್ವಾಮಿ, ಪನ್ನೀರ್‌ಸೆಲ್ವಂ ಸೇರಿ ಪಕ್ಷದ ಕಾರ್ಯಕರ್ತರು ಜಯಾ ಸಮಾಧಿಗೆ ತೆರಳಿ ನಮನ ಸಲ್ಲಿಸಿದರು. ನಂತರ ಎಐಎಡಿಎಂಕೆ ತನ್ನ ಟ್ವಿಟ್ಟರ್ ಖಾತೆಯಲ್ಲಿ ಜಯಲಲಿತಾ ಸ್ಮರಣಾರ್ಥ ವಿಡಿಯೋ ಬಿಡುಗಡೆ ಮಾಡಿತು.

ಇನ್ನು ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ಸಾವಿಗೆ ಸಂಬಂಧಿಸಿದ ಯಾವುದೇ ಸುದ್ದಿಯನ್ನೂ ಮಾಧ್ಯಮಗಳು ವರದಿ ಮಾಡುವಂತಿಲ್ಲ ಎಂದು ಸಾವಿನ ತನಿಖೆ ನಡೆಸುತ್ತಿರುವ ನ್ಯಾ. ಆರ್ಮುಗ ಸ್ವಾಮಿ ಆಯೋಗ ಮಾಧ್ಯಮಗಳಿಗೆ ನಿರ್ಬಂಧ ವಿಧಿಸಿದೆ. ಜಯಾ ಅವರ ಸಾವಿಗೆ ಸಂಬಂಧಿಸಿದಂತೆ ತಮಿಳುನಾಡಿನಾದ್ಯಂತ ಹಲವು ಊಹಾಪೋಹಗಳು, ಆರೋಪಗಳು ಈವರೆಗೆ ಕೇಳಿ ಬರುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ಮಾಧ್ಯಮಗಳು ಈ ಕುರಿತ ವರದಿ ಮಾಡದಂತೆ ನಿರ್ಬಂಧ ಹೇರಿದೆ.

ಜಯಾ ಅವರ 2ನೇ ಪುಣ್ಯ ತಿಥಿ ಅಂಗವಾಗಿ ಶಾಂತಿಯುತ ಪ್ರತಿಭಟನೆಯನ್ನು ನಡೆಸಲಾಯಿತು. ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಮತ್ತು ಉಪಮುಖ್ಯಮಂತ್ರಿ ಓ. ಪನ್ನಿರಸೇಲ್ವಂ ಅವರು ಅಣ್ಣಾ ದ್ರಾವಿಡ ಮುನೇತ್ರ ಕಜಾಗಮ್ (ಎಐಎಡಿಎಂಕೆ) ಯ ಕಾರ್ಯಕರ್ತರ ಜತೆಗೂಡಿ ಕಪ್ಪು ಮತ್ತು ಬಿಳಿ ವಸ್ತ್ರಗಳನ್ನು ಧರಿಸಿ 'ಅಮ್ಮಾ' ಎಂದು ಕೂಗುತ್ತಾ ಶಾಂತಿಯುತ ಪ್ರತಿಭಟನೆ ನಡೆಸಿ ಅವರಿಗೆ ಗೌರವ ಸಲ್ಲಿಸಿದರು.

## ಶಬರಿಮಲೆ: ನಿಷೇಧಾಜ್ಞೆ ಮುಂದುವರಿಕೆ

**ತಿರುವನಂತಪುರಂ:** ನಿರ್ದಿಷ್ಟ ವಯೋಮಿತಿಯ ಮಹಿಳೆಯರ ಪ್ರವೇಶ ನಿರಾಕರಿಸಿ ನಡೆಯುತ್ತಿರುವ ಪ್ರತಿಭಟನೆ ಮುಂದುವರಿದ ಪರಿಣಾಮ ಶಬರಿಮಲೆಯಲ್ಲಿ ಡಿ. 8ರ ಮಧ್ಯ ರಾತ್ರಿವರೆಗೂ ನಿಷೇಧಾಜ್ಞೆ ಮುಂದುವರಿಸಲಾಗಿದೆ.

ವಿಶೇಷ ಅಧಿಕಾರಿ ಮತ್ತು ಹೆಚ್ಚುವರಿ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ನಿಷೇಧಾಜ್ಞೆ ಮುಂದುವರಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಇದಕ್ಕೂ ಮುನ್ನ ಶಬರಿಮಲೆ ದೇಗುಲಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಲು ಕೇರಳ ಹೈಕೋರ್ಟ್‌ನಿಂದ ರಚಿತವಾಗಿರುವ ಮೂವರು ಸದಸ್ಯರನ್ನೊಳಗೊಂಡ ಮೇಲ್ವಿಚಾರಣ ಸಮಿತಿಯು ಬುಧವಾರ ಶಬರಿಮಲೆ ದೇಗುಲಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿತ್ತು. ಶಬರಿಮಲೆ ದೇಗುಲದ ಬೆಟ್ಟದಲ್ಲಿನ ಸೌಲಭ್ಯಗಳ ಕೊರತೆ ಬಗ್ಗೆ ದೂರುಗಳು ಕೇಳಿಬಂದ ಹಿನ್ನೆಲೆ ಯಾತ್ರಾರ್ಥಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಿ ಯಾತ್ರೆ ಸುಗಮಗೊಳಿಸಲು ನಿವೃತ್ತ ನ್ಯಾಯಾಧೀಶ ಪಿ ಆರ್ ರಮಣ್, ನ್ಯಾಯಾಧೀಶ ಎಸ್.ಸಿರಿಜಗನ್ ಮತ್ತು ಎಡಿಜಿಪಿ ಹೇಮಚಂದ್ರನ್ ಅವರನ್ನು ಸಮಿತಿಯಲ್ಲಿ ನೇಮಿಸಲಾಗಿತ್ತು.

ಎಲ್ಲ ಮಹಿಳೆಯರಿಗೂ ಅಯ್ಯಪ್ಪ ದೇಗುಲ ಪ್ರವೇಶಕ್ಕೆ ಸೆ. 28ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬೆನ್ನಲ್ಲೇ ದೇಗುಲದ ಬಳಿ ಅಯ್ಯಪ್ಪ ಭಕ್ತರಿಂದ ಭಾರಿ ಪ್ರತಿಭಟನೆ ಎದುರಾಗಿತ್ತು. ಅಂದಿನಿಂದ ಇಂದಿನವರೆಗೂ ದೇಗುಲ ಪ್ರವೇಶಕ್ಕೆ ಬಂದ ಯಾವ ಮಹಿಳೆಯರಿಗೂ ಪ್ರತಿಭಟನಾಕಾರರು ಅವಕಾಶ ನೀಡದೆ ಅರ್ಧದಲ್ಲೇ ತಡೆದು ಕಳುಹಿಸಿದ್ದಾರೆ.

## ಸರ್ದಾರ್ ಪಟೇಲ್ ಪ್ರತಿಮೆ ದಾಖಲೆ ಪ್ರವಾಸಿಗರ ಭೇಟಿ



**ನರ್ಮದಾ:** ಗುಜರಾತ್‌ನ ನರ್ಮದಾ ನದಿಯ ಮಧ್ಯೆ ದೇಶದ ಮೊದಲ ಗೃಹ ಸಚಿವ, ಉಪ ಪ್ರಧಾನಿ ಸರ್ದಾರ್ ವಲ್ಲಭಭಾಯ್ ಪಟೇಲ್‌ರ ಹೆಸರಿನಲ್ಲಿ ನಿರ್ಮಿಸಲಾದ ಜಗತ್ತಿನ ಅತಿ ಎತ್ತರದ 'ಏಕತಾ ಪ್ರತಿಮೆ' ವೀಕ್ಷಣೆಗೆ ದಾಖಲೆಯ ಪ್ರಮಾಣದಲ್ಲಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ದೇಶ-ವಿದೇಶಗಳ ಪ್ರವಾಸಿಗರನ್ನು ಸೆಳೆಯುತ್ತಿರುವ ಗುಜರಾತ್‌ನ ಸ್ಟ್ಯಾಚ್ಯೂ ಆಫ್ ಯೂನಿಟಿ ವೀಕ್ಷಣೆಗೆ ದಿನಕ್ಕೆ 30 ಸಾವಿರ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಕಳೆದ ತಿಂಗಳಲ್ಲಿ 2.79 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು, ಟಿಕೆಟ್ ಮಾರಾಟದಿಂದ ₹ 6.38 ಕೋಟಿ ಆದಾಯ ಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅ. 31ರಂದು ಪ್ರಧಾನಿ ಮೋದಿ ಅವರು 182 ಅಡಿ ಎತ್ತರದ ಸರ್ದಾರ್ ಪ್ರತಿಮೆ ಲೋಕಾರ್ಪಣೆಗೊಳಿಸಿದ್ದರು. ನ. 1ರ ನಂತರ ಪ್ರತಿಮೆ ವೀಕ್ಷಣೆಗೆ ಅವಕಾಶ ಕಲ್ಪಿಸಿದ್ದು, ಪ್ರವಾಸಿಗರು ದಂಡಿಯಾಗಿ ಆಗಮಿಸುತ್ತಿದ್ದಾರೆ. 182 ಮೀಟರ್ ಎತ್ತರದ ಏಕತಾ ಪ್ರತಿಮೆ ದಿನಕ್ಕೆ 30 ಸಾವಿರ ಪ್ರವಾಸಿಗರನ್ನು ಸೆಳೆಯುತ್ತಿದ್ದು, ರಾಜ್ಯದ ಬೊಕ್ಕಸಕ್ಕೆ ಆದಾಯ ಹರಿದುಬರುತ್ತಿದೆ ಎಂದು ಪ್ರವಾಸೋದ್ಯಮ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಎಸ್.ಜೆ. ಹೈದರ್ ತಿಳಿಸಿದ್ದಾರೆ. ಇತ್ತೀಚೆಗೆ ಅಮೆರಿಕದ ಕಾನ್ಸುಲ್ ಜನರಲ್ ಈಡ್ಗಾರ್ಡ್ ಕಾಗನ್, ಏಕತಾ ಪ್ರತಿಮೆಗೆ ಭೇಟಿ ನೀಡಿದ್ದರು. ಪ್ರತಿಮೆ ನಿರ್ಮಾಣದ ಹಿಂದಿರುವ ಎಂಜಿನಿಯರಿಂಗ್ ಕೈಚಳಕದ ಕೌಶಲ್ಯ ಅದ್ಭುತವೆಂದು ಕೊಂಡಾಡಿದ್ದಾರೆ.

## ವೈಭವೀಕರಣಕ್ಕೆ ಗಾಂಧಿ ವಿರುದ್ಧವೂ ಟೀಕೆ: ರಾಹುಲ್

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ತಮ್ಮನ್ನು ತಾವು ಶ್ರೇಷ್ಠ ಎಂದು ವೈಭವೀ ಕರಿಸಿಕೊಳ್ಳಲು ಮಹಾತ್ಮ ಗಾಂಧಿಯಿಂದ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರನ್ನು ನಿಂದಿಸಬಲ್ಲರು ಎಂದು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ತಿರುಗೇಟು ನೀಡಿದ್ದಾರೆ. ಮಂಗಳವಾರ ರಾಜಸ್ತಾನದ ಚುನಾವಣಾ ಪ್ರಚಾರದಲ್ಲಿ ಮಾತನಾಡಿದ್ದ ಮೋದಿ ಕಾಂಗ್ರೆಸ್ ನಾಯಕರ ದೂರದೃಷ್ಟಿ ಕೊರತೆಯಿಂದಾಗಿ ಕರ್ತಾರ್‌ಪುರ ಪಾಕಿಸ್ತಾನದ ಗಡಿಯಲ್ಲಿದೆ ಎಂದು ಟೀಕಿಸಿದ್ದರು. ಇದಕ್ಕೆ ರಾಹುಲ್ ತಿರುಗೇಟು ನೀಡಿದ್ದಾರೆ. 'ಪ್ರಧಾನಿ ಮೋದಿ ಅವರ ಮನೋಭಾವ ಎಂತಹದ್ದು ಎಂಬುದು ಸ್ಪಷ್ಟವಾಗಿದೆ. ಅವರು ತಮ್ಮನ್ನು ತಾವು ಶ್ರೇಷ್ಠ ಎಂದು ಬಿಂಬಿಸಿಕೊಳ್ಳಲು ಗಾಂಧೀಜಿ, ಪಟೇಲ್ ಹಾಗೂ ಇತರೆ ಮಹಾನ್ ನಾಯಕರ ಬಗ್ಗೆ ಕೀಳಾಗಿ ಮಾತನಾಡಲು ಹಿಂಜರಿಯುವುದಿಲ್ಲ' ಎಂದು ರಾಹುಲ್ ಟೀಕಿಸಿದ್ದಾರೆ.

## ನನ್ನ ಪತಿ ಕೊಂದವರಿಗೆ ಗುಂಡಿಡಬೇಕು

**ಲಖನೌ:** ನನ್ನ ಪತಿಗೆ ಆದ ಗತಿಯನ್ನೇ ಅವರನ್ನ ಹತ್ಯೆಮಾಡಿದವರಿಗೆ ಆಗಬೇಕು. ಅದನ್ನು ನಾನು ನೋಡಿದಾಗಲೇ ನಮ್ಮ ಕುಟುಂಬಕ್ಕೆ ನ್ಯಾಯ ಸಿಕ್ಕಂತಾಗುತ್ತದೆ ಎಂದು ಬುಲಂದ್ ಶಹರ್ ಹಿಂಸಾಚಾರಕ್ಕೆ ಬಲಿಯಾಗಿರುವ ಪೊಲೀಸ್ ಅಧಿಕಾರಿ ಸುಬೋಧ್ ಕುಮಾರ್ ಸಿಂಗ್ ಅವರ ಪತ್ನಿ ದುಃಖ ವ್ಯಕ್ತಪಡಿಸಿದ್ದಾರೆ. ನನ್ನ ಪತಿಯ ಮೇಲೆ ದಾಳಿಯಾಗಿದ್ದು ಇದೇ ಮೊದಲಲ್ಲ. ಈ ಹಿಂದೆ ಕರ್ತವ್ಯದಲ್ಲಿದ್ದಾಗಲೆ ಅವರ ಮೇಲೆ 2 ಬಾರಿ ಗುಂಡಿನ ದಾಳಿ ನಡೆದಿದ್ದವು. ಆದರೆ ಅವರಿಗೆ ನ್ಯಾಯ ಸಿಗುತ್ತಿಲ್ಲ' ಎಂದರು.

## ಬ್ಯಾಂಕ್‌ಗಳ ಶೇ.100ರಷ್ಟು ಸಾಲ ತೀರಿಸುತ್ತೇನೆ: ಮಲ್ಯ

**ದೆಹಲಿ:** ಬ್ಯಾಂಕ್‌ಗಳಿಂದ ಪಡೆದ ಎಲ್ಲ ಸಾಲವನ್ನು ತೀರಿಸುತ್ತೇನೆ. ದಯವಿಟ್ಟು ಸ್ವೀಕರಿಸಿ ಎಂದು ಮದ್ಯದೊರೆ ಉದ್ಯಮಿ ವಿಜಯ ಮಲ್ಯ ಟ್ವೀಟ್ ಮಾಡಿ ಹೊಸ ಸಂಚಲನ ಮೂಡಿಸಿದ್ದಾರೆ.

ಅನೇಕ ಬ್ಯಾಂಕ್‌ಗಳಿಂದ ಸಾವಿರಾರು ಕೋಟಿ ಸಾಲ ಪಡೆದು ಮರು ಪಾವತಿ ಮಾಡದೇ ದೇಶ ಬಿಟ್ಟಿರುವ ವಿಜಯ್ ಮಲ್ಯ ಅವರನ್ನು ಭಾರತಕ್ಕೆ ಹಸ್ತಾಂತರಿಸಬೇಕು ಎಂಬ ಭಾರತದ ಅರ್ಜಿ ಬ್ರಿಟನ್ ನ್ಯಾಯಾಲಯದ ಮುಂದಿದೆ. ಈ ಅರ್ಜಿ ವಿಚಾರಣೆಗೆ 5 ದಿನಗಳು ಬಾಕಿ ಉಳಿದಿರುವ ಈ ಹೊತ್ತಿಲ್ಲಿ ಸರಣಿ ಟ್ವೀಟ್ ಮಾಡಿರುವ ಮಲ್ಯ, ತಾನು ಎಲ್ಲ ಸಾಲ ಮರು ಪಾವತಿಸಲು ಸಿದ್ದ ಎಂದಿದ್ದಾರೆ.

'ನನ್ನನ್ನು ಹಸ್ತಾಂತರಿಸುವುದು ಮತ್ತು ಸಾಲ ಮರು ಪಾವತಿ ಎರಡು ಪ್ರತ್ಯೇಕ ಸಂಗತಿಗಳಾಗಿವೆ. ಅದು ಕಾನೂನು ರೀತಿಯಲ್ಲಿಯೇ ನಡೆಯಲಿ. ಸಾರ್ವಜನಿಕರ ಹಣ ಅದು ಪ್ರಮುಖ ಸಂಗತಿ. ನಾನು ಸಾಲ ಪಡೆದಿರುವ ಮೊತ್ತವನ್ನು ಸಂಪೂರ್ಣವಾಗಿ ಮರು ಪಾವತಿಸಲು ನಾನು ಸಿದ್ಧನಿದ್ದೇನೆ. ಬ್ಯಾಂಕ್ ಮತ್ತು ಸರಕಾರ ಅದನ್ನು ದಯಮಾಡಿ ಸ್ವೀಕರಿಸಬೇಕು ಎಂದು ನಾನು ವಿನಂತಿಸುತ್ತೇನೆ. ಅದನ್ನು ಸ್ವೀಕರಿಸಲು ಸಿದ್ಧವಿಲ್ಲದಿದ್ದರೆ ಕಾರಣವೇನು?' ಎಂದು ಮಲ್ಯ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

'ವಿಮಾನ ಇಂಧನ ದರ ಏರಿಕೆಯಾಗಿರುವ ಕಾರಣ ವಿಮಾನ ಸಂಸ್ಥೆ ಆರ್ಥಿಕ ಮುಗ್ಗಟ್ಟು ಅನುಭವಿಸಿದೆ. ಕಚ್ಚಾ ತೈಲ ಬ್ಯಾರೆಲ್‌ಗೆ 140 ಡಾಲರ್‌ವರೆಗೆ ದರ ಏರಿಕೆ ಮಾಡಿದಾಗ, ಕಿಂಗ್ ಫಿಷರ್‌ಗೆ ಆರ್ಥಿಕ ಸಮಸ್ಯೆ ಕಂಡು ಬಂತು. ನಾನು ಪಡೆದ ಸಾಲವನ್ನು ಮರು ಪಾವತಿಸಲು ಸಿದ್ಧನಿದ್ದೇನೆ' ಎಂದಿದ್ದಾರೆ.

'ಬ್ಯಾಂಕ್‌ಗೆ ಸಾಲ ಮರುಪಾವತಿ ಮಾಡದೆ ಪರಾರಿಯಾದವ ಎಂದು ರಾಜಕಾರಣಿಗಳು, ಮಾಧ್ಯಮದವರು ಬಿಂಬಿಸುತ್ತಿದ್ದಾರೆ. ಇದೆಲ್ಲವೂ ಸುಳ್ಳು. ನಾನು ಹಣ ಪಾವತಿ ಮಾಡುತ್ತೇನೆ ಎಂದು ಹೇಳಿದ್ದೆ, ಅದು ಯಾಕೆ ಯಾರಿಗೂ ಕೇಳಿಸುವುದಿಲ್ಲ' ಎಂದು ಪ್ರಶ್ನಿಸಿದ್ದಾರೆ.

'ಮೂರು ದಶಕಗಳಿಂದ ಭಾರತದ ಬಹುದೊಡ್ಡ ಮದ್ಯ ಕಂಪನಿಯನ್ನು ನಿರ್ವಹಿಸಿ ರಾಜ್ಯದ ಖಜಾನೆಗೆ ಸಾವಿರ ಕೋಟಿಯಷ್ಟು ಹಣ ಸಂಭಾವನೆ ನೀಡಿದ್ದೇನೆ. ಕಿಂಗ್ ಫಿಷರ್ ವಿಮಾನ ಸಂಸ್ಥೆ ಕೂಡ ಸಾಕಷ್ಟು ಹಣವನ್ನು ಸಂಭಾವನೆ ನೀಡಿದೆ. ಉತ್ತಮವಾಗಿದ್ದ ವಿಮಾನ ಸಂಸ್ಥೆ ನಷ್ಟವಾಯಿತು. ಆದರೆ ನಾನು ಇನ್ನೂ ಬ್ಯಾಂಕ್‌ಗಳಿಗೆ ಸಾಲ ಮರು ಪಾವತಿಸಲು ಸಿದ್ಧವಾಗಿದ್ದೇನೆ ದಯಮಾಡಿ ಸ್ವೀಕರಿಸಿ' ಎಂದು ಮಲ್ಯ ಟ್ವೀಟ್ ಮಾಡಿದ್ದಾರೆ.

ಸಾಲ ಮರು ಪಾವತಿ ಮಾಡದೇ ಇರುವ ಮಲ್ಯ ವಿರುದ್ಧ 2016ರಲ್ಲಿ ಬ್ಯಾಂಕ್‌ಗಳು ಕ್ರಮ ತೆಗೆದುಕೊಳ್ಳಲು ಮುಂದಾದ ವೇಳೆ ಮಲ್ಯ ದೇಶ ಬಿಟ್ಟು ಪರಾರಿಯಾಗಿದ್ದರು. ಮಲ್ಯ ಅವರನ್ನು ನಮಗೆ ಹಸ್ತಾಂತರಿಸಬೇಕು ಎಂದು ಕಳೆದ ಫೆಬ್ರವರಿ ತಿಂಗಳಲ್ಲಿ ಭಾರತ ಬ್ರಿಟನ್‌ಗೆ ಮನವಿ ಮಾಡಿತ್ತು.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಮೈಸೂರು
"ಅರಣ್ಯ ಭವನ" ಅಶೋಕಪುರಂ, ಮೈಸೂರು.
ದೂ./ಫ್ಯಾ.ಸಂ: 0821-2484606 ಇ-ಮೇಲ್:dcfsfmys@yahoo.com
ಕ್ರ.ಸಂ.:ಬಿ1/ಬಿಯುಡಿ/ಟೆಂಡರ್/ಸಿಆರ್.01/2018-19 ದಿ: 03.12.2018

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2018-19ನೇ ಸಾಲಿನಲ್ಲಿ ಮೈಸೂರು ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೊಳಪಟ್ಟ ಮೈಸೂರು/ಪಿರಿಯಾಪಟ್ಟಣ/ಹುಣಸೂರು ಸಾಮಾಜಿಕ ಅರಣ್ಯ ವಲಯಗಳಲ್ಲಿ ಹೊಸ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು 2018-19ನೇ ಸಾಲಿನಲ್ಲಿ ಈ ವಿಭಾಗದಲ್ಲಿ ನೋಂದಾಯಿಸಿಕೊಂಡಿರುವ ಅರಣ್ಯ ಗುತ್ತಿಗೆದಾರರು ಹಾಗೂ ಕಾರ್ಯಪಾಲಕ ಅಭಿಯಂತರರ ಕಛೇರಿಯಿಂದ ನೊಂದಾಯಿಸಿಕೊಂಡಿರುವ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ-ಟೆಂಡರನ್ನು ಆಹ್ವಾನಿಸಿದ್ದು, 2018-19ನೇ ಸಾಲಿನ ಆರ್ಥಿಕ ವರ್ಷದಲ್ಲಿಯೇ ಮೇಲ್ಕಂಡ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾದ್ದರಿಂದ ನಿಬಂಧನೆಗಳನ್ನೊಳಗೊಂಡಂತೆ ಇ-ಟೆಂಡರ್ ಆಹ್ವಾನಿಸಲಾಗಿದೆ. ಈಗಾಗಲೇ ಈ ವಿಭಾಗದಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಮೇಲ್ಕಂಡ ಕಾಮಗಾರಿಗಳಿಗೆ ಮೊದಲನೇ ಬಾರಿಗೆ ಇ-ಟೆಂಡರ್ ಸ್ವೀಕರಿಸಲು ದಿನಾಂಕ: 17.12.2018ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಅಲ್ಪಾವಧಿ ಇ-ಟೆಂಡರನ್ನು ದಿನಾಂಕ: 18.12.2018 ರಂದು ಅಪರಾಹ್ನ 4.30 ಘಂಟೆಗೆ ತೆರೆಯಲಾಗುವುದು. ಮೇಲ್ಕಂಡ ದಿನದಂದು ಸದರಿ ಅಲ್ಪಾವಧಿ ಇ-ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಮೇಲ್ಕಂಡ ಕಾಮಗಾರಿಗಳಿಗೆ ಎರಡನೇ ಬಾರಿಗೆ ಇ-ಟೆಂಡರ್ ಸ್ವೀಕರಿಸಲು ದಿನಾಂಕ: 24.12.2018ರ ಸಂಜೆ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಟೆಂಡರನ್ನು ದಿನಾಂಕ: 26.12.2018 ರಂದು ಅಪರಾಹ್ನ 4.30 ಘಂಟೆಗೆ ತೆರೆಯಲಾಗುವುದು. ಮರು ಟೆಂಡರ್ ಸಂಬಂಧ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇತರೆ ಹೆಚ್ಚಿನ ಮಾಹಿತಿಗಳನ್ನು http://www.eproc.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಸದರಿ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಮೈಸೂರು.
DIPR/DD/MYS/MCA/654

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ,
ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಕೋಲಾರ ವಿಭಾಗ, ಕೋಲಾರ-563 101.
ದೂರವಾಣಿ: 08152-222022 ಫ್ಯಾಕ್ಸ್: 08152-227443
e-Mail: eeklr@kpwd.gov.in website: www.kpwd.gov.in
e-Portal: http://eproc.karnataka.gov.in

ಇ-ಟೆಂಡರ್ ಪ್ರಕಟಣೆ-ಕೆಡಬ್ಲ್ಯೂ-4
ಮರು ಟೆಂಡರ್ ಅಧಿಸೂಚನೆ ಸಂಖ್ಯೆ: 21/2018-19
ದಿನಾಂಕ: 01.12.2018

ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: 13-1/2017-18 ದಿನಾಂಕ: 07.07.2017.
2. ಟೆಂಡರ್ ಅಧಿಸೂಚನೆ ಸಂಖ್ಯೆ: ದಿನಾಂಕ: 60-1/2017-18 ದಿನಾಂಕ: 15.02.2018

ಕೋಲಾರ ಜಿಲ್ಲೆ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: ನಬಾರ್ಡ್ ಆರ್.ಐ.ಡಿ.ಎಫ್ 23 ಮತ್ತು 5054-ಅಪೆಂಡಿಕ್ಸ್ ಇ ಅಡಿಯಲ್ಲಿ 2 ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಠ ರೂ.180.00 ಲಕ್ಷಗಳು ಗರಿಷ್ಠ ರೂ.200.00 ಲಕ್ಷಗಳು.** ಇ.ಎಂ.ಡಿ ಮೊತ್ತ: **ಕನಿಷ್ಠ ರೂ.2.70 ಲಕ್ಷಗಳು ಗರಿಷ್ಠ: ರೂ.3.00 ಲಕ್ಷಗಳು** ಕಾಲಾವಧಿ: ಕನಿಷ್ಠ **4 ತಿಂಗಳು** ನಿರ್ವಹಿಸಲು ನೋಂದಾಯಿತ ಗುತ್ತಿಗೆದಾರಿಂದ ಇ-ಪ್ರೊಕ್ಯೂರ್‌ಮೆಂಟ್ ಅನ್ವಯ ಮರುಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆ.ಡಬ್ಲ್ಯು-3 ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc.karnataka.gov.in) ನಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **26.12.2018 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **27.12.2018 ರಂದು ಸಂಜೆ 16.30 ಗಂಟೆಯ** ನಂತರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಲೋ.ಬಂ. ಮತ್ತು ಒ.ಜ.ಸಾ ಇಲಾಖೆ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ117/ಎಂ.ಸಿ.ಎ/2018-19

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ
ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ
ಬಾಗಲಕೋಟ ಇವರ ಕಛೇರಿ.
ಸಂಖ್ಯೆ.ಲೋಇಃಬಾವಿಃಪಿಬಿ/ಕೆಡಬ್ಲು/2018-19/3095 ದಿನಾಂಕ:03-12-2018

-ಃ ಅಲ್ಪಾವಧಿ ಟೆಂಡರ ಪ್ರಕಟಣೆ ಃ-

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೂಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ವರ್ಕ ಇಂಡೆಂಟ ಸಂ.91003, 86443, 86444, 86445, 86749, 91020, 87042, 86739, 86634, 86635, 86637, 86640, 86644, 86612, 86608, 86601, 86647, 86649, 86650, 86651, 86654, 86656, 86449, 86450, 86452, 86455, 91033, 91028, 91026, 86750, 86751, 86752, 86753, 86760, 87436, 87433, 86520, 91109, 86522, 86523, 86062, 87336, 87338, 87340, 87497, 87352, 87341, 87353, 87498, 86462, 86463, 87844, 91031, 86625, 86627, 86658, 86661, 86662, 86664, 86665, 86667, 86610, 86616, 86465, 86466, 86467, 86469, 86470, 86471, 91024, 91022, 91021, 91042, 91039, 91037, 86754, 86769, 86603, 86604, 86530, 87343, 87344, 86447, 86655, 86457, 86458, 86459, 86460, 86764, 86532, 87345, 87347, 86464, 91015, 91038, 86790, 86533, 87499, 87500 ಕಾಮಗಾರಿಗಳಿಗೆ (ಪ್ಯಾಕೇಜಗಳನ್ನೊಳಗೊಂಡಂತೆ) ಗರಿಷ್ಠ ಅಂದಾಜು ಮೊತ್ತ ರೂ. 89.26 ಲಕ್ಷ ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 0.81 ಲಕ್ಷಗಳ ಟೆಂಡರ ಅಹ್ವಾನಿಸಲಾಗಿದೆ.

ಸೂಚನೆ: ಸದರಿ ಕಾಮಗಾರಿಗಳ ಗುತ್ತಿಗೆ ಮೊತ್ತಕ್ಕೆ ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವದು ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಬದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ. ದರದಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು.

1.ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ 17-12-2018 ಸಂಜೆ 5.30 ಘಂಟೆ ವರೆಗೆ
2.ಟೆಂಡರ ಸ್ವೀಕರಿಸುವ ದಿನಾಂಕ 20-12-2018 ರಂದು ಮದ್ಯಾಹ್ನ 4.00 ಘಂಟೆ ವರೆಗೆ
3.ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ 21-12-2018 ರಂದು ಮದ್ಯಾಹ್ನ 4.30 ಘಂಟೆ ವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಬಂದರು ಮತ್ತು ಒಳನಾಡು
DIPR/BGK/RO-NO-251/MCA/2018-19 ಜಲಸಾರಿಗೆ ಇಲಾಖೆ ವಿಭಾಗ ಬಾಗಲಕೋಟ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

**VISHVAVANI**, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 080-2860 5544, 2860 0054
Printed MNS Printers TVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:3, Issue:332